# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ 703-2017** **ಪಿ. ಡಬ್ಲುಃ 03**

**ಸಿ. ಡಬ್ಲು 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ನಟೇಶ್<br>ಗೋಪಾಲಕೃಷ್ಣ<br>52 ವರ್ಷ<br>ಸಹಾಯಕ ತಾಂತ್ರಿಕ ಅಧಿಕಾರಿ,<br>ಲೋಕೋಪಯೋಗಿ ಇಲಾಖೆ<br>ಮೈಸೂರು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 08-06-2022 |

**ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲೇರಿಂದಃ**

ನಾನು ಮೈಸೂರು ಮುಡಾದಲ್ಲಿ 2017 ರಿಂದ 2019 ರವರೆಗೆ ಸಹಾಯಕ ಇಂಜಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-1 ನಮ್ಮ ಮೇಲಾಧಿಕಾರಿ. ಚಾಸಾ-4 ರಿಂದ 6 ನನಗೆ ಗೊತ್ತು. ನಂಜನಗೂಡಿನ ಉಪ-ಚಾನಾವಣಾ ಸಂಬಂಧ ಜಿಲ್ಲಾಧಿಕಾರಿಯವರು ನನ್ನನ್ನು ಚಾಸಾ-1 ರವರಿಗೆ ಸಹಾಯಕನಾಗಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆ ಮಾಡಿದ್ದರು.

ಉಪ-ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದ್ದಾಗ ನಾವು ಕರ್ತವ್ಯದಲ್ಲಿ ಇದ್ದಾಗ ದಿ.03-04-2017 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಂಜನಗೂಡಿನ ಮೈಸೂರು-ಊಟಿ ರಸ್ತೆಯ ಗ್ರಾಮಾಂತರ ಪೊಲೀಸ್ ಠಾಣೆ ಮುಂಭಾಗ ನಾನು ಮತ್ತು ಚಾಸಾ-3 ಮತ್ತು 4 ರವರ ಸಮ್ಮುಖದಲ್ಲಿ ಮೈಸೂರು ಕಡೆಯಿಂದ ಬರುತ್ತಿದ್ದ ವಾಹಗಳನ್ನು ತಪಾಸಣೆ ಮಾಡುತ್ತಿದಾಗ ಸುಮಾರು 8.45 ಗಂಟೆ ಸಮಯದಲ್ಲಿ ಮೈಸೂರು ಕಡೆಯಿಂದ ಗುಂಡ್ಲುಪೇಟೆ ಕಡೆಗೆ ಒಂದು ಬುಲೇರೋ ವಾಹನ ಬರುತ್ತಿದ್ದು ಸದರಿ ವಾಹನ ಸಂ.ಕೆಎ-25-ಎಎ-4565 ಆಗಿದ್ದು ಅನುಮಾನ ಬಂದು ಸದರಿ ವಾಹನವನ್ನು ತಡೆದು ತಪಾಸಣೆ ಮಾಡಿದಾಗ ಅದರಲ್ಲಿ ಒಂದು ಕಪ್ಪು ಬಣ್ಣದ ಕಬ್ಬಿಣದ ಬಾಕ್ಸ್ ಕಂಡುಬಂದಿತು. ಸದರಿ ವಾಹನದಲ್ಲಿ ವಾಹನ ಚಾಲಕ ನಾಗರಾಜು ಹಾಗೂ ಕಸ್ಟೋಡಿಯನ್

ಮಹೇಶ್ ಮತ್ತು ಮಲ್ಲಿಕಾರ್ಜುನ ಎಂಬುವವರು ಇದ್ದರು. ಪೆಟ್ಟಿಗೆಯನ್ನು ತೆಗೆದು ನೋಡಲಾಗಿ ಅದರಲ್ಲಿ ರೂ.500/- ಮುಖ ಬೆಲೆಯ 4 ಬಂಡಲ್ ಇರುವುದು ಕಂಡುಬಂದಿತು. ಸದರಿಯವರಿಗೆ ವಾಹನದ ಪಟ್ಟಿಗೆ ಒಳಗೆ ಇದ್ದ ಹಣವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ವಿಚಾರ ಮಾಡಲಾಗಿ ಅವರು ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೆಗಾಲದ ಕೆನರಾ ಬ್ಯಾಂಕ್ ಎ.ಟಿ.ಎಂ ಗಳಿಗೆ ಹಣ ತುಂಬಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದ್ದ ಕಾರಣ ಸದರಿ ಹಣ ಸಂಬಂಧ ದಾಖಲಾತಿಗಳನ್ನು ಕೇಳಲಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿದೇ ಇದ್ದ ಕಾರಣ ಅನುಮಾನ ಬಂದು ಹಣವನ್ನು ಜಪ್ತು ಮಾಡಲಾಯಿತು. ಒಂದು ಬಂಡಲ್ ತಲಾ ರೂ.5,00,000/- ಗಳಂತೆ ಒಟ್ಟು 4 ಬಂಡಲ್ ಗಳು ಇದ್ದು. ಒಟ್ಟಾರೆ ರೂ.20,00,000/- ಗಳು ಇತ್ತು. ನೀತಿಸಂಹಿತೆ ಜಾರಿಯಲ್ಲಿದ್ದು ಆರೋಪಿಗಳು ಸೂಕ್ತ ದಾಖಲಾತಿಗಳನ್ನು ಒದಗಿಸದೇ ಇದ್ದ ಕಾರಣ ಚುನಾವಣೆ ಮತದಾರರಿಗೆ ಆಮಿಷ ಒಡ್ಡಲು ಸದರಿ ಹಣವನ್ನು ಸಾಗಿಸುತ್ತಿದ್ದಾರೆ ಎಂದು ಅನುಮಾನ ಬಂದು ಹಣವನ್ನು ಜಪ್ತು ಮಾಡಲಾಯಿತು. ನಂತರ ಪಂಚರಾದ ಚಾಸಾ-5 ಮತ್ತು 6 ರವರಿಗೆ ಆರೋಪಿತರು ಯಾವುದೇ ದಾಖಲಾತಿಗಳು ಇಲ್ಲದೆ ಹಣವನ್ನು ಸಾಗಿಸುತ್ತಿದ್ದಾರೆ ಎಂಬ ವಿಚಾರವನ್ನು ತಿಳಿಸಿ ಪಂಚರಾಗುವಂತೆ ಕೋರಿಕೊಂಡಾಗ ಸದರಿಯವರ ಒಪ್ಪಿದ ಮೇರೆಗೆ ಅವರ ಸಮಕ್ಷಮ ಸಂ.ಕೆಎ-25-ಎಎ-4565 ವಾಹನ ಮತ್ತು ರೂ.500/- ಮುಖಬೆಲೆಯ 4 ಬಂಡಲ್‌ಗಳು ಇದ್ದು ಅದರಲ್ಲಿ ಇದ್ದ ತಲಾ ರೂ.5,00,000/- ಗಳನ್ನು ಅಂದರೆ ಒಟ್ಟಾರೆ ರೂ.20,00,000/- ಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು ರಾತ್ರಿ 9.00 ರಿಂದ 9.30 ಗಂಟೆವರಗೆ ಮಹಜರ್ ಕ್ರಮ ಜರುಗಿಸಲಾಯಿತು. ಮಹಜರ್ ಮಾಡುವ ಕಾಲದಲ್ಲಿ ನಾನು ಚಾಸಾ-1 ಮತ್ತು ಚಾಸಾ-3 ರಿಂದ 6 ರವರು ಸ್ಥಳದಲ್ಲಿ ಹಾಜರಿದ್ದರು. ಘಟನಾ ಸ್ಥಳದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ವಾಹನ ಮತ್ತು ಹಣವನ್ನು ಜಪ್ತುಪಡಿಸಿಕೊಳ್ಳಲಾಯಿತು. ನಂತರ ಚಾಸಾ-1 ರವರು ಆರೋಪಿತರೊಂದಿಗೆ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಸಾಕ್ಷಿಯು ಪಂಚಾನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ನಿಪಿ-1 ರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಘಟನಾ ದಿವಸ ಕೃತ್ಯಕ್ಕೆ ಬಳಸಿದ ವಾಹನ, ಕಬ್ಬಿಣದ ಪೆಟ್ಟಿಗೆ ಮತ್ತು ಹಣ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ರಿಂದ 6 ಎಂದು ಗುರುತಿಸಲಾಗಿದೆ. ಸಾಕ್ಷಿಯು ಘಟನಾ ದಿನದಂದು ವಶಕ್ಕೆ ಪಡೆದುಕೊಂಡ ಆರೋಪಿಗಳು ಈ ದಿನ

ನ್ಯಾಯಾಲಯದ ಮುಂದೆ ಇದ್ದು ಸದರಿಯವರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಘಟನಾ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**